





ಇತ್ತೀಚೆಗೆ ಕುಟುಂಬದೊಡನೆ ಮತ್ತೆ ಈ ಜಾಗಕ್ಕೆ ತೆರಳಿದೆ. ಮಳೆಗಾಲದಲ್ಲಿ ನೋಡಿದ್ದ ನನಗೆ, ಚಳಿಗಾಲದಲ್ಲಿ ಈ ಜಾಗ ಹೇಗಿರಬಹುದು ಎನ್ನುವ ಕುತೂಹಲವಿತ್ತಷ್ಟೇ.

ಅಬ್ಬಾ.. ಅಂತ್ಯಕಾಣದ ಪರ್ವತದ ಸಾಲು, ದಟ್ಟ ಕಾನನ, ನೀರು ಹರಿದ ಗುರುತು. ಸೂರ್ಯ ನೆತ್ತಿಗೆ ಹತ್ತಿರುವ ಸಮಯದಲ್ಲೂ ತಂಪಾದ ಗಾಳಿಯ ವಾತಾವರಣ. ಹಸಿರ ಸೊಬಗು. ಮಳೆಗಾಲದಲ್ಲಿ ಬರೀ ಮಳೆ ಮತ್ತು ಮೋಡಗಳಿದ್ದವು. ಈಗ ಅಂಥದೇ ಚಳಿಯ ಜೊತೆಗೆ ನಿಸರ್ಗ ಹಸಿರಿನ ಹೊದಿಕೆ ಹೊದ್ದುಕೊಂಡ ಈ ಪ್ರದೇಶವನ್ನು ನೋಡುವುದೇ ಒಂದು ಭಾಗ್ಯ.

ಇತ್ತೀಚೆಗೆ ಈ ಪ್ರದೇಶ ಜನಪ್ರಿಯವಾಗಿದೆ. ಮಳೆಗಾಲದಲ್ಲಿ ಕುಟುಂಬದೊಡನೆ ಇಲ್ಲಿಗೆ ಬರುವುದು ಕಷ್ಟ. ಹಾಗಾಗಿ ಚಳಿಗಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರುತ್ತಾರೆ. ಇಲ್ಲಿಗೆ ಮುಖ್ಯ ರಸ್ತೆ ಇದೆ. ಆದರೆ ಅದು ಭಾರೀ ಹಳ್ಳಗಳಿಂದ ಕೂಡಿದ ಹಾದಿ. ಮಳೆಯಿಂದ ಈ ರಸ್ತೆಯೂ ಹಾಳಾಗಿದೆ. ವರ್ಷ ಋತುವಿನ ಮೋಡಗಳ ನಡುವೆ ಇಲ್ಲಿನ ಸೃಷ್ಟಿ ಸೌಂದರ್ಯದ ಸೊಬಗು ಸವಿಯಲು ಶರದೃತುವೇ ಸರಿಯಾದ ಸಮಯ.